ದಿ.06.11.2025 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಅರ್ಜಿದರರ ಪರ ಶ್ರೀ ಎ.ಎನ್.ಟಿ ವಕೀಲರಿಂದ.**

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು, ಅದರಲ್ಲಿರುವ ಸಂಗತಿಗಳೆಲ್ಲಾ ಸತ್ಯವಿದ್ದು, ಅದನ್ನು ನಾನೇ ಹೇಳಿ ಬರೆಸಿದ್ದೇನೆ ಹಾಗೂ ಪ್ರಮಾಣ ಪತ್ರಕ್ಕೆ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿಂದ ಮುಖ್ಯವಿಚಾರಣೆಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

*(ರಾಘವೇಂದ್ರ. ಡಿ.)*
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಭದ್ರಾವತಿ

ದಿ.06.02.2026 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದರರ ಪರ ಶ್ರೀ ಎ.ಎನ್.ಟಿ ವಕೀಲರಿಂದ.**

1. ವಂಶವೃಕ್ಷವನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-01 ಎಂದು ಗುರುತಿಸಲಾಯಿತು.
2. ಆನ್ ಲೈನ್ ಎಂ.ಆರ್ ಸಂಖ್ಯೆ ಟಿ-10/2025-26 ರ ಮುಟೇಶನ್ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ತಕರಾರಿಗೆ ಒಳಪಟ್ಟು ನಿಪಿ-02 ಎಂದು ಗುರುತಿಸಲಾಯಿತು.
3. ಆನ್ ಲೈನ್ ಎಂ.ಆರ್ ಸಂಖ್ಯೆ ಟಿ-09/2025-26 ರ ಮುಟೇಶನ್ ಪ್ರತಿಯನ್ನು ಅದನ್ನು ತಕರಾರಿಗೆ ಒಳಪಟ್ಟು ನಿಪಿ-03 ಎಂದು ಗುರುತಿಸಲಾಯಿತು.
4. ಎರಡು ಆನ್ ಲೈನ್ ಪ್ರತಿಯ ಆರ್.ಟಿ.ಸಿ ಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ತಕರಾರಿಗೆ ಒಳಪಟ್ಟು ನಿಪಿ-04 ಮತ್ತು 05 ಎಂದು ಗುರುತಿಸಲಾಯಿತು.

5. 03 ಆನ್ ಲೈನ್ ಇ.ಸಿ ದಾಖಲೆಗಳನ್ನು ಹಾಜರು ಪಡಿಸಿದ್ದು ಅವುಗಳ ನ್ನು ತಕರಾರಿಗೆ ಒಳಪಟ್ಟು ಕ್ರಮವಾಗಿ ನಿಪಿ–6 ರಿಂದ ನಿಪಿ–08 ಎಂದು ಗುರುತಿಸಲಾಯಿತು.
6. ಕೈ ಬರವಣಿಗೆಯ 12 ಆರ್.ಟಿ.ಸಿ ಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ–9 ಎಂದು ಗುರುತಿಸಲಾಯಿತು.
7. ಆನ್ ಲೈನ್ ವಂಶವೃಕ್ಷದ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ–10 ಎಂದು ಗುರುತಿಸಲಾಯಿತು.
8. ದಿಃ 28–08–2013 ರ ಪಂಚಾಯ್ತಿ ಪರಿಕತ್ ಅನ್ನು ಹಾಜರು ಪಡಿಸಿದ್ದು ಪ್ರತಿವಾದಿ ಪರ ವಕೀಲರು ಸದರಿ ದಾಖಲೆಯನ್ನು ಗುರುತು ಮಾಡಲು ಬರುವುದಿಲ್ಲ ಎಂದು ತಕರಾರು ಮಾಡಿರುತ್ತಾರೆ, ವಕೀಲರ ತಕರಾರಿಗೆ ಒಳಪಟ್ಟು ಅದನ್ನು ನಿಪಿ– 11 ಎಂದು ಗುರುತಿಸಲಾಯಿತು.
9. ಸರ್ವೆ ನಂ. 26/3–ಎ ಕ್ಕೆ ಸಂಬಂದಪಟ್ಟಂತಹ ಒಂದು ಆನ್ ಲೈನ್ ಆರ್.ಟಿ.ಸಿಯನ್ನು ಹಾಜರು ಪಡಿಸಿದ್ದು ಅದನ್ನು ತಕರಾರಿಗೆ ಒಳಪಟ್ಟು ನಿಪಿ– 12 ಎಂದು ಗುರುತಿಸಲಾಯಿತು.
10. ಸರ್ವೆ ನಂ. 28/1 ಕ್ಕೆ ಸಂಬಂದಪಟ್ಟಂತಹ ಒಂದು ಆನ್ ಲೈನ್ ಆರ್.ಟಿ.ಸಿಯನ್ನು ಹಾಜರು ಪಡಿಸಿದ್ದು ಅದನ್ನು ತಕರಾರಿಗೆ ಒಳಪಟ್ಟು ನಿಪಿ– 13 ಎಂದು ಗುರುತಿಸಲಾಯಿತು.
11. ಸರ್ವೆ ನಂ. 64/1 ಎ–ಪಿ–1 ಕ್ಕೆ ಸಂಬಂದಪಟ್ಟಂತ ಒಂದು ಆನ್ ಲೈನ್ ಆರ್.ಟಿ.ಸಿಯನ್ನು ಹಾಜರು ಪಡಿಸಿದ್ದು ಅದನ್ನು ತಕರಾರಿಗೆ ಒಳಪಟ್ಟು ನಿಪಿ– 14 ಎಂದು ಗುರುತಿಸಲಾಯಿತು.
12. ಸರ್ವೆ ನಂ. 27/3 ಕ್ಕೆ ಸಂಬಂದಪಟ್ಟಂತಹ ಒಂದು ಆನ್ ಲೈನ್ ಆರ್.ಟಿ.ಸಿಯನ್ನು ಹಾಜರು ಪಡಿಸಿದ್ದು ಅದನ್ನು ತಕರಾರಿಗೆ ಒಳಪಟ್ಟು ನಿಪಿ– 15 ಎಂದು ಗುರುತಿಸಲಾಯಿತು.
13. ಸರ್ವೆ ನಂ. 38/6 ಕ್ಕೆ ಸಂಬಂದಪಟ್ಟಂತಹ ಒಂದು ಆನ್ ಲೈನ್ ಆರ್.ಟಿ.ಸಿಯನ್ನು ಹಾಜರು ಪಡಿಸಿದ್ದು ಅದನ್ನು ತಕರಾರಿಗೆ ಒಳಪಟ್ಟು ನಿಪಿ– 16 ಎಂದು ಗುರುತಿಸಲಾಯಿತು.
14. 4 ಅಸೆಸೆಮಂಟ್ ರಿಜಿಸ್ಟರ್ ಎಕ್ಸಟ್ರಾಕ್ಟ ಅನ್ನು ಹಾಜರು ಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ– 17 ರಿಂದ ನಿಪಿ–20 ಎಂದು ಗುರುತಿಸಲಾಯಿತು.

**ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ರಾಘವೇಂದ್ರ. ಡಿ.)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಭದ್ರಾವತಿ

ದಿ.25.03.2026 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್.ಕೆ ವಕೀಲರಿಂದ.**

1. ಈ ದಾವೆಯನ್ನು ಮಾಡಲು ನಾನು ಮತ್ತು ನನ್ನ ತಾಯಿ ಮಾಹಿತಿಯನ್ನು ಕೊಟ್ಟಿರುತ್ತೇವೆ. ರುದ್ರಪ್ಪ ನನ್ನ ದೊಡ್ಡಪ್ಪ. ಒಟ್ಟು ಕುಟುಂಬಕ್ಕೆ ಎಷ್ಟು ಆಸ್ತಿ ಇತ್ತು ಎಂಬುದರ ಮಾಹಿತಿ ನನಗೆ ಇರುತ್ತದೆ. ಈ ದಾವೆಯಲ್ಲಿ ಹೇಳಿರುವ '**ಎ**' ಮತ್ತು '**ಬಿ**' ಶೆಡ್ಯೂಲ್ ಆಸ್ತಿಗಳನ್ನು ಹೊರತು ಪಡಿಸಿ ಬೇರೆ ಆಸ್ತಿಗಳು ಒಟ್ಟು ಕುಟುಂಬದಲ್ಲಿರುವುದಿಲ್ಲ. ಒಟ್ಟು ಕುಟುಂಬದ ಮುಖ್ಯಸ್ಥರಾಗಿ ನನ್ನ ತಂದೆ ಕೆಲಸ ಮಾಡುತ್ತಿದ್ದರು. ಒಟ್ಟು ಕುಟುಂಬದ ವ್ಯವಹಾರಗಳನ್ನು ನನ್ನ ತಂದೆ ನಾನು ಹುಟ್ಟಿದಾಗಿನಿಂದಲ್ಲೂ ನಡೆಸುತ್ತಾ ಬಂದಿರುತ್ತಾರೆ.

2. ನನ್ನ ಅಜ್ಜ ದೊಡ್ಡನಂಜಪ್ಪನವರಿಗೆ ಎಷ್ಟು ಆಸ್ತಿ ಇತ್ತು ಎಂದು ನನಗೆ ಗೊತ್ತಿರುತ್ತದೆ. ನನ್ನ ಅಜ್ಜ ದೊಡ್ಡನಂಜಪ್ಪನವರು ಎಷ್ಟು ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ, ಆದರೆ ಖರೀದಿ ಮಾಡಿರುವ ವಿಚಾರ ಮಾತ್ರ ಗೊತ್ತಿರುತ್ತದೆ. ನನ್ನ ತಂದೆ ಮತ್ತು ರುದ್ರಪ್ಪನವರು ಒಟ್ಟು ಕುಟುಂಬದಲ್ಲಿ ಏನೇನು ಕೆಲಸ ಮಾಡುತ್ತಿದ್ದರು ಎಂದು ನನಗೆ ಗೊತ್ತಿರುತ್ತದೆ. ಅವರಿಬ್ಬರು ವ್ಯವಸಾಯದ ಜೊತೆಗೆ ಒಟ್ಟು ಕುಟುಂಬದ ಪರವಾಗಿ ಭತ್ತ ಮತ್ತು ಜೋಳದ ವ್ಯಾಪಾರ ಮಾಡುತ್ತಿದ್ದರು. ಅವರಿಗೆ ಎಷ್ಟು ಆದಾಯವಿತ್ತು ಎಂಬುದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

3. ದಾವಾ-ಎ-ಶೆಡ್ಯೂಲ್ ಐಟಂ.ನಂಬರ್-01, 02, 04 ಮತ್ತು 06 ಅನ್ನು ನನ್ನ ತಂದೆ ಕುಟುಂಬದ ಮುಖ್ಯಸ್ಥರಾಗಿದ್ದ ಕಾರಣ ಅವರ ಹೆಸರಿಗೆ ಖರೀದಿ ಮಾಡಿರುತ್ತಾರೆಂದರೆ ಸರಿ. ನನ್ನ ತಂದೆಗಿಂತ ಮುಂಚೆ ನನ್ನ ದೊಡ್ಡಪ್ಪನವರಾದ ರುದ್ರಪ್ಪನವರು ದಿಃ 06-06-2020 ರಂದು ಮೃತಪಟ್ಟಿರುತ್ತಾರೆ. ನನ್ನ ದೊಡ್ಡಪ್ಪ ಮತ್ತು ನನ್ನ ತಂದೆಯ ಸಂಬಂಧ ಚೆನ್ನಾಗಿಯೇ ಇತ್ತು. ನನ್ನ ತಂದೆ ಒಂದು ಜಮೀನನ್ನು ನನ್ನ ಹೆಸರಿಗೆ ದಾನಪತ್ರವನ್ನು ಬರೆದುಕೊಟ್ಟಿದ್ದರಿಂದ ನನ್ನ ತಂದೆ ಮತ್ತು ನನ್ನ ದೊಡ್ಡಪ್ಪನವರ ನಡುವೆ ಬಿನ್ನಾಭಿಪ್ರಾಯ ಬಂದಿರುತ್ತದೆ ಎಂದರೆ ಸರಿಯಲ್ಲ. ನನ್ನ ಕುಟುಂಬದ ಮುಖ್ಯಸ್ಥರಾಗಿ ಎಲ್ಲಾ ಸದಸ್ಯರನ್ನು ಒಂದೇ ರೀತಿಯಲ್ಲಿ ಕಾಣುತ್ತಿದ್ದರು ಎಂದರೆ ಸರಿ. ನನ್ನ ತಂದೆ 01 ನೇ ಪ್ರತಿವಾದಿಯನ್ನು ಸ್ವಂತ ಮಗನ ಹಾಗೆ ನೋಡುತ್ತಿದ್ದರು ಎಂದರೆ ಸರಿ.

ದಾವಾ–ಎ–ಶೆಡ್ಯೂಲಿನ ಐಟಂ.ನಂಬರ್–06ರ ಸರ್ವೆ ನಂ. 38/6 ಅನ್ನು ನನ್ನ ಹೆಸರಿಗೆ ದಾನಪತ್ರ ಬರೆದುಕೊಟ್ಟ ನಂತರ ಕುಟುಂಬದಲ್ಲಿ ಬಿನ್ನಾಭಿಪ್ರಾಯ ಬಂದಿರುತ್ತದೆ ಎಂದರೆ ಸರಿ.

**4.** ದಾವಾ–ಬಿ–ಶೆಡ್ಯೂಲಿನ ಆಸ್ತಿಗಳು ನಮ್ಮ ಕುಟುಂಬಕ್ಕೆ ಹೇಗೆ ಬಂದಿರುತ್ತದೆ ಎಂದು ನನಗೆ ಮಾಹಿತಿ ಇರುವುದಿಲ್ಲ. ನನ್ನ ಅಜ್ಜ ದಾವಾ–ಬಿ ಶೆಡ್ಯೂಲ್ ನ ಯಾವ ಐಟಂ.ನಂಬರ್ ನಲ್ಲಿ ಮನೆ ಕಟ್ಟಿರುತ್ತಾರೆಂದು ನನಗೆ ಮಾಹಿತಿ ಇರುವುದಿಲ್ಲ. ದಾವಾ–ಬಿ ಶೆಡ್ಯೂಲ್ ಆಸ್ತಿಗಳನ್ನು ಹೊರತು ಪಡಿಸಿ ಬೇರೆ ಯಾವುದೇ ಮನೆ ಮತ್ತು ನಿವೇಶನ ಒಟ್ಟು ಕುಟುಂಬಕ್ಕೆ ಇರುವುದಿಲ್ಲ. ದಾವಾ–ಬಿ ಶೆಡ್ಯೂಲಿನ ಯಾವಾ ಆಸ್ತಿಯಲ್ಲಿ ನಾವೆಲ್ಲರೂ ವಾಸವಾಗಿದ್ದೇವು ಎಂದು ಹೇಳಲು ಆಗುವುದಿಲ್ಲ. ನನ್ನ ತಂದೆ ಮತ್ತು ನನ್ನ ದೊಡ್ಡಪ್ಪ ಒಂದೇ ಮನೆಯಲ್ಲಿ ವಾಸವಾಗಿದ್ದರು ಎಂದರೆ ಸರಿ. ನನ್ನ ದೊಡ್ಡಪ್ಪನವರಾದ ರುದ್ರಪ್ಪನ ಇಬ್ಬರು ಮಕ್ಕಳಾದ ನಂಜುಂಡಪ್ಪ ಮತ್ತು ಮೃತ ಮಲ್ಲೇಶ ರವರು ಭತ್ತ ಮತ್ತು ಜೋಳದ ವ್ಯಾಪಾರದಲ್ಲಿ ಸಹಾಯ ಮಾಡುತ್ತಿದ್ದರು ಎಂದರೆ ಸರಿ. ನನ್ನ ತಂದೆಗೆ ಒಟ್ಟು ಕುಟುಂಬದಲ್ಲಿ ಸಂಪಾದನೆ ಮಾಡಿದಂತಹ ಆಸ್ತಿಗಳನ್ನು ಅವರ ಅಣ್ಣನ ಮಕ್ಕಳಿಗೆ ಕೊಡಬಾರದೆಂಬ ಯಾವುದೇ ದುರ್ಭಾವನೆ ಇರಲಿಲ್ಲ. ಸಂಪ್ರಾದಯಂತೆ ಎಲ್ಲಾ ಆಸ್ತಿಗಳು 01 ನೇ ಪ್ರತಿವಾದಿಗೆ ಸೇರಬೇಕೆಂದು ಹೇಳಿ ನನ್ನ ತಂದೆ ಬಯಸಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಮೃತಪಡುವ ತನಕ 01ನೇ ಪ್ರತಿವಾದಿಯೇ ಅವರ ಯೋಗಕ್ಷೇಮವನ್ನು ನೋಡಿಕೊಂಡಿರುತ್ತಾರೆಂದರೆ ಸರಿಯಲ್ಲ. ನನ್ನ ತಂದೆ ಕೋರನಾ ಬಂದು ಮೃತಪಟ್ಟಿರುತ್ತಾರೆ ಎಂದರೆ ಸರಿ. 01ನೇ ಪ್ರತಿವಾದಿಯೇ ನನ್ನ ತಂದೆಯನ್ನು ಆಸ್ಪತ್ರೆಗೆ ದಾಖಲು ಮಾಡಿರುತ್ತಾರೆ ಮತ್ತು ನೋಡಿಕೊಂಡಿರುತ್ತಾರೆ ಎಂದರೆ ಸರಿ. 01 ನೇ ಪ್ರತಿವಾದಿಯೇ ನನ್ನ ತಂದೆಯ ಆಸ್ಪತ್ರೆಯ ಖರ್ಚುಗಳನ್ನು ಕೊಟ್ಟಿರುತ್ತಾರೆ. 01 ನೇ ಪ್ರತಿವಾದಿಯೇ ನನ್ನ ತಂದೆಯ ಕ್ರಿಯಾ ಕರ್ಮಗಳನ್ನು ನಡೆಸಿರುತ್ತಾರೆ ಎಂದರೆ ಸರಿ. 01 ನೇ ಪ್ರತಿವಾದಿ ನನ್ನನ್ನು ಸ್ವಂತ ತಂಗಿಯನ್ನಾಗಿ ನೋಡಿಕೊಂಡು ಬಂದಿರುತ್ತಾರೆ ಎಂದರೆ ಸರಿ. ನಾನು ಮದುವೆಯಾಗಿ ನನ್ನ ಗಂಡನ ಮನೆಗೆ ಹೋದ ನಂತರ, ನನ್ನ ಗಂಡ ಕುಟುಂಬದ ವ್ಯವಹಾರಗಳಲ್ಲಿ ಮಧ್ಯಾ ಪ್ರವೇಶಿಸಿದ ನಂತರ ನಮ್ಮ ಕುಟುಂಬದಲ್ಲಿ ಬಿನ್ನಾಭಿಪ್ರಾಯ ಬಂದಿರುತ್ತದೆ ಎಂದರೆ ಸಾಕ್ಷಿಯು ಮೊದಲಿನಿಂದಲ್ಲೂ ಬಿನ್ನಾಭಿಪ್ರಾಯ ಬಂದಿರುತ್ತದೆ ಎಂದು ಹೇಳುತ್ತಾರೆ.

**5.** ನನ್ನ ಅಜ್ಜ ದೊಡ್ಡನಂಜಪ್ಪನವರಿಗೆ ರುದ್ರಮ್ಮ, ಗೌರಮ್ಮ ಮತ್ತು 04 ನೇ ಪ್ರತಿವಾದಿ ದೇವಿರಮ್ಮ ಎಂಬ ಮೂರು ಜನ ಹೆಣ್ಣು ಮತ್ತು ಬಸವರಾಜಪ್ಪ ಮತ್ತು ರುದ್ರಪ್ಪ ಇಬ್ಬರು ಗಂಡು ಮಕ್ಕಳು ಎಂದರೆ ಸರಿ. ರುದ್ರಮ್ಮನವರು ಈಗ ಮೃತ ಪಟ್ಟಿರುತ್ತಾರೆ ಎಂದರೆ ಸರಿ. ಅವರಿಗೆ ರತ್ನಮ್ಮ ಮತ್ತು ಬಸಮ್ಮ ಎಂಬ ಇಬ್ಬರು ಹೆಣ್ಣು ಮಕ್ಕಳಿರುತ್ತಾರೆ ಎಂದರೆ ಸರಿ. ಗೌರಮ್ಮ ಮೃತಪಟ್ಟಿರುತ್ತಾರೆ ಎಂದರೆ ಸರಿ. ಗೌರಮ್ಮನವರಿಗೆ ರುದ್ರಪ್ಪ ಮತ್ತು ದಾಕ್ಷಯಣಮ್ಮ ಎಂಬ ಇಬ್ಬರು ಮಕ್ಕಳೆಂದರೆ ಸರಿ. ಗೌರಮ್ಮನವರ ಮಗ ರುದ್ರಪ್ಪ ಮೃತ ಪಟ್ಟಿರುತ್ತಾರೆ ಎಂದರೆ ಸರಿ. ಗೌರಮ್ಮನವರ ಮಗ ರುದ್ರಪ್ಪನ ಹೆಂಡತಿಯ ಮಂಜುಳ ಮತ್ತು ಅವರಿಗೆ ಬಿಂದು ಮತ್ತು ಮಲ್ಲಿಕಾರ್ಜುನ ಎಂಬ ಇಬ್ಬರು ಮಕ್ಕಳಿರುತ್ತಾರೆ ಎಂದರೆ ಸರಿ. ದೇವಿರಮ್ಮರವನ್ನು ಹೊರತು ಪಡಿಸಿ ಬೇರೆ ಯಾರನ್ನು ಪಕ್ಷಗಾರರನ್ನಾಗಿ ಸೇರಿಸಿರುವುದಿಲ್ಲ ಎಂದರೆ ಸರಿ. ಮೇಲೆ ಹೇಳಿದವರು ಎಲ್ಲಿ ವಾಸವಾಗಿರುತ್ತಾರೆ

ಎಂಬ ವಿಚಾರ ನನಗೆ ಗೊತ್ತಿರುತ್ತದೆ. ಅವರೆಲ್ಲರೂ ದೊಡ್ಡನಂಜಪ್ಪನ ವಾರಸುದಾರರೆಂದು ನನಗೆ ಗೊತ್ತಿರುತ್ತದೆ. ದೊಡ್ಡನಂಜಪ್ಪನ ವಾರಸುದಾರರು ಯಾರ್ಯಾರು ಇದ್ದಾರೆಂಬ ವಿಚಾರ ನನಗೆ ಗೊತ್ತಿದ್ದರೂ ಸಹ ನಾನು ಉದ್ದೇಶಪೂರಕವಾಗಿ ಸೇರಿಸಿಲ್ಲ ಎಂದರೆ ಸರಿ.

**ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

*(ರಾಘವೇಂದ್ರ. ಡಿ.)*
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಭದ್ರಾವತಿ

ದಿ.06.06.2026 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್.ಕೆ ವಕೀಲರಿಂದ.**

**6.** ದಿಃ 14-08-2019 ರಂದು ನಾನು, ನನ್ನ ತಂದೆ ಮತ್ತು ನನ್ನ ತಾಯಿ ಸೇರಿ ಅರಸನಘಟ್ಟ ಗ್ರಾಮದ ಸರ್ವೆ ನಂ.60/09 ರಲ್ಲಿ 03 ಗುಂಟೆ ಜಮೀನನ್ನು ಜಿ.ಪರಮೇಶ್ವರಪ್ಪನವರಿಗೆ ಮಾರಾಟ ಮಾಡಿರುತ್ತೇವೆ ಎಂದರೆ ಸರಿ. ಈ ಜಮೀನನ್ನು ನಾವು ಮಾರಾಟ ಮಾಡಿರುತ್ತೇವೆ ಎಂದು ನನ್ನ ವಾದಪತ್ರದಲ್ಲಿ ಹೇಳಿರುವುದಿಲ್ಲ ಮತ್ತು ಈ ಆಸ್ತಿಯನ್ನು ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ.

**7.** ನನ್ನ ಅಜ್ಜಿ ತಿಪ್ಪಮ್ಮ ಸರ್ವೆ ನಂ. 28 ರಲ್ಲಿ 01 ಎಕರೆ 20 ಗುಂಟೆ ಜಮೀನನ್ನು ಮಲ್ಲಪ್ಪನವರಿಗೆ ಮಾರಾಟ ಮಾಡಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ನನ್ನ ಅಜ್ಜಿ ತಿಪ್ಪಮ್ಮ ಸರ್ವೆ ನಂ. 01/05 ರಲ್ಲಿ 01 ಎಕರೆ 20 ಗುಂಟೆ ಜಮೀನನ್ನು ಚನ್ನಬಸಪ್ಪನವರಿಗೆ ಮಾರಾಟ ಮಾಡಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ಈ ದಾವೆ ಮಾಡಬೇಕಾದರೆ ನಮ್ಮ ಕುಟುಂಬಕ್ಕೆ ಎಷ್ಟು ಆಸ್ತಿಗಳು ಇದ್ದವು ಎಂದು ನಾನು ತಿಳಿದುಕೊಂಡಿರುತ್ತೇನೆ. ನನ್ನ ಅಜ್ಜಿ ಮಾರಾಟ ಮಾಡಿದಂತಹ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸಾಕ್ಷಿಯು ಮಾರಾಟ ಮಾಡಿದ ವಿಚಾರ ನನಗೆ ಗೊತ್ತಿರಲಿಲ್ಲ ಎಂದು ಹೇಳುತ್ತಾರೆ.

**8.** ನನ್ನ ವಾದಪತ್ರದಲ್ಲಿ ಹೇಳಿರುವ ದಿಃ28-08-2013 ರಂದು ಬಾಯಿ ಮಾತಿನಲ್ಲಿ ವಿಭಾಗ ಮಾಡಿಕೊಂಡ ನಂತರ ನಾವೆಲ್ಲರೂ ಸೇರಿ ಖಾತೆ ಬದಲಾವಣೆ ಮಾಡಿಕೊಳ್ಳಲು ಪ್ರಯತ್ನ ಪಟ್ಟಿರುವುದಿಲ್ಲ. ನಾವು ಬಾಯಿ ಮಾತಿನಲ್ಲಿ ವಿಭಾಗ ಮಾಡಿಕೊಳ್ಳಬೇಕಾದರೆ ನನ್ನ

ತಂದೆ, ರುದ್ರಪ್ಪ, ದೇವಿರಮ್ಮ, ಮಲ್ಲೇಶಪ್ಪ, ಕಲ್ಲೇಶಪ್ಪ, ವಾಸುದೇವ್, ಕರಿಬಸಪ್ಪ, ಮೂರ್ತಿ, ಮಹೇಶಪ್ಪ ಮತ್ತು ಮತ್ತೊಬ್ಬ ಮಲ್ಲೇಶಪ್ಪ ಇದ್ದರು. ಆ ದಿವಸ ನಾನು, 01 ನೇ ಪ್ರತಿವಾದಿ ಮತ್ತು ಅವರ ಸಹೋದರ ಸಹೋದರಿಯರು ಯಾರೂ ಹಾಜರಿರಲಿಲ್ಲ. ಸಮಾನ್ಯವಾಗಿ ಪಂಚಾಯ್ತಿ ಮಾಡಿದರೆ ವಯಸ್ಕ ಮಕ್ಕಳೇಲ್ಲರೂ ಸೇರಿ ಪಂಚಾಯ್ತಿ ಮಾಡುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಪಂಚಾಯ್ತಿಯಾದ ದಿವಸ ನಾನು ಹಾಜರಿದ್ದೆ ಎಂದು ಹೇಳುತ್ತಾರೆ. ನನ್ನ ತಂದೆ, ನನ್ನ ದೊಡ್ಡಪ್ಪ ಹಾಗೂ 01ನೇ ಪ್ರತಿವಾದಿಗೆ ಯಾವ ರೀತಿ ದಾಖಲೆಯನ್ನು ಮಾಡಿಸಬೇಕೆಂಬುದರ ಬಗ್ಗೆ ವ್ಯವಹಾರ ಜ್ಞಾನವಿರುತ್ತದೆ ಎಂದರೆ ಸರಿ. ಈ ಹಿಂದೆ ಜಮೀನುಗಳನ್ನು ಖರೀದಿ ಮಾಡಿದಾಗ ಮತ್ತು ಮಾರಾಟ ಮಾಡಿದಾಗ ನೊಂದಾಯಿತಾ ಕ್ರಯದ ಪತ್ರಗಳ ಮೂಖಾಂತರ ವ್ಯವಹಾರ ಮಾಡಿರುತ್ತಾರೆ ಎಂದರೆ ಸರಿ. ಬಾಯಿ ಮಾತಿನಲ್ಲಿ ವಿಭಾಗ ಮಾಡಿಕೊಂಡಂತೆ ನೊಂದಾಯಿತಾ ವಿಭಾಗಪತ್ರ ಮಾಡಿಕೊಳ್ಳಲು ಯಾರಿಗೂ ತೊಂದರೆ ಇರಲಿಲ್ಲ. ಬಾಯಿ ಮಾತಿನಲ್ಲಿ ವಿಭಾಗ ಮಾಡಿಕೊಂಡ ನಂತರ, ತಾಲ್ಲೂಕು ಕಚೇರಿಗೆ ಖಾತೆ ಬದಲಾವಣೆ ಮಾಡಿಕೊಳ್ಳಲು ಅರ್ಜಿಯನ್ನು ಕೊಟ್ಟಿರುವುದಿಲ್ಲ.

**9.** ಬಾಯಿ ಮಾತಿನಲ್ಲಿ ವಿಭಾಗ ಮಾಡಿಕೊಂಡಿದ್ದನ್ನು ಬರವಣಿಗೆ ಮಾಡಿಕೊಳ್ಳಲು ತೊಂದರೆ ಇರಲಿಲ್ಲ. ಬಾಯಿ ಮಾತಿನಲ್ಲಿ ವಿಭಾಗ ಮಾಡಿಕೊಂಡಿದ್ದೇವು ಎಂದು ಹೇಳಿದ್ದನ್ನು ಹೊರತು ಪಡಿಸಿ ಆಸ್ತಿಗಳನ್ನು ಹಂಚಿಕೆ ಮಾಡಿಕೊಳ್ಳಲು ಬೇರೆ ಯಾವುದೇ ವ್ಯವಹಾರವಾಗಿರುವುದಿಲ್ಲ. ನಿಪಿ-11 ಪಂಚಾಯ್ತಿ ಪಾಲು ಪಾರಿಖತ್ ಅನ್ನು ಈ ಕೇಸಿಗಾಗಿ ಸೃಷ್ಟಿ ಮಾಡಿಕೊಂತಹ ದಾಖಲೆ ಎಂದರೆ ಸರಿಯಲ್ಲ. ನಿಪಿ-11 ಪಂಚಾಯ್ತಿ ಪಾಲು ಪಾರಿಖತ್ ಗೆ ಪ್ರತಿವಾದಿಗಳು ಯಾರು ಸಹಿ ಮಾಡಿರುವುದಿಲ್ಲ ಎಂದರೆ ಸರಿ. ನಾನು ಮತ್ತು ನನ್ನ ತಾಯಿಯು ಸಹ ನಿಪಿ-11 ಪಂಚಾಯ್ತಿ ಪಾಲು ಪಾರಿಖತ್ ಗೆ ಸಹಿ ಮಾಡಿರುವುದಿಲ್ಲ ಎಂದರೆ ಸರಿ. ನಿಪಿ-11 ಪಂಚಾಯ್ತಿ ಪಾಲು ಪಾರಿಖತ್ ದಾಖಲೆಯನ್ನು ನಿಂಬೆಗುಂದಿ ಗ್ರಾಮದಲ್ಲಿ ಬರೆದಿರುತ್ತಾರೆ, ಯಾರು ಬರೆದಿರುತ್ತಾರೆಂದು ಗೊತ್ತಿಲ್ಲ. ನಿಪಿ-11 ಪಂಚಾಯ್ತಿ ಪಾಲು ಪಾರಿಖತ್ ದಾಖಲೆ ಬರೆಯಲು ನನ್ನ ತಂದೆ ಬಸವರಾಜಪ್ಪನವರು ಮಾಹಿತಿ ಕೊಟ್ಟಿರುತ್ತಾರೆ. ನಮ್ಮ ಊರಿಗೂ ಮತ್ತು ನಿಂಬೆ ಗುಂದಿ ಗ್ರಾಮಕ್ಕೆ 04/05 ಕಿ.ಮೀ ದೂರವಾಗುತ್ತದೆ. ನಿಪಿ-11 ಪಂಚಾಯ್ತಿ ಪಾಲು ಪಾರಿಖತ್ ದಾಖಲೆಯನ್ನು ಖಾತೆ ಬದಲಾವಣೆ ಮಾಡಿಸಿಕೊಳ್ಳಲು ಮಾಡಿಸಿರುತ್ತಾರೆ. ಈ ದಾಖಲೆ ಬರವಣಿಗೆಯಾದ ನಂತರ ಖಾತೆ ಬದಲಾವಣೆ ಮಾಡಿಕೊಳ್ಳಲು ಪ್ರಯತ್ನ ಪಟ್ಟಿರುತ್ತೇವೆ. ನನ್ನ ತಂದೆ ಮತ್ತು ದೊಡ್ಡಪ್ಪ ವಿಭಾಗ ಮಾಡಿಕೊಳ್ಳಲು ಒಪ್ಪಿದ್ದರು ಆದರೆ ನನ್ನ ದೊಡ್ಡಪ್ಪನ ಮಗ ವಿಭಾಗ ಮಾಡಿಕೊಳ್ಳಲು ಒಪ್ಪಿರಲಿಲ್ಲ. ನಿಂಬೆಗುಂದಿ ಗ್ರಾಮದಲ್ಲಿ ಪತ್ರಬರಹಗಾರರು ಇರುತ್ತಾರೆ ನನ್ನ ತಂದೆ ಮತ್ತು ನನ್ನ ದೊಡ್ಡಪ್ಪನಿಗೆ ವಿಭಾಗಪತ್ರವನ್ನು ಮಾಡುವ ಇಚ್ಚೆ ಇದ್ದರೆ ಅದನ್ನು ನೊಂದಣಿ ಮಾಡಿಸಲು ತೊಂದರೆ ಇರಲಿಲ್ಲ ಎಂದರೆ ಸರಿ. ನಿಪಿ-11 ಪಂಚಾಯ್ತಿ ಪಾಲು ಪಾರಿಖತ್ ಗೆ ರುದ್ರಪ್ಪನವರು ಸಹಿ ಮಾಡಿರುವುದಿಲ್ಲ ಮತ್ತು ಅದರಲ್ಲಿರುವ ಸಹಿಗಳು ರುದ್ರಪ್ಪನದಲ್ಲ ಎಂದರೆ ಸರಿಯಲ್ಲ. ಈ ಕೇಸಿಗಾಗಿ ನಾನು, ನನ್ನ ಗಂಡ, ನನ್ನ ತಾಯಿ ಮತ್ತು ನಂಜುಂಡಪ್ಪನವರ ಕುಟುಂಬದವರಿಗೆ ಆಗದೇ ಇರುವವರ ಜೊತೆಯಲ್ಲಿ ಶಾಮೀಲಾಗಿ

ನಿಪಿ–11 ಪಂಚಾಯ್ತಿ ಪಾಲು ಪಾರಿಖತ್ ದಾಖಲೆಯನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

**10.** ನನ್ನ ತಂದೆ ಮತ್ತು ದೊಡ್ಡಪ್ಪ ರುದ್ರಪ್ಪನವರ ನಡುವೆ ಎಂದೂ ಒಟ್ಟು ಕುಟುಂಬದ ಆಸ್ತಿಗಳು ವಿಭಾಗವಾಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತುಗಳ ಮೇಲೆ ನನ್ನ ತಂದೆಯ ಸಹೋದರಿಯರು ಮತ್ತು ಮೃತ ಸಹೋದರಿಯರ ವಾರಸುದಾರರಿಗೆಲ್ಲರಿಗೂ ಹಕ್ಕಿರುತ್ತದೆ ಎಂದರೆ ಸರಿ. ಅವರೇಲ್ಲರನ್ನು ಪಕ್ಷಗಾರರನ್ನಾಗಿ ಮಾಡಿದರೆ ಅವರಿಗೂ ಸಹ ಹಿಸ್ಸೆ ಕೊಡಬೇಕಾಗುತ್ತದೆ ಎಂದು ಅವರನ್ನು ಈ ಪ್ರಕರಣದಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. 01 ರಿಂದ 03 ಪ್ರತಿವಾದಿಗಳು ಎಂದೂ ಆಸ್ತಿಗಳನ್ನು ವಿಭಾಗ ಮಾಡಬೇಡಿ ಎಂದು ತಕರಾರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಒಟ್ಟು ಕುಟುಂಬದ ಎಲ್ಲಾ ಸದಸ್ಯರನ್ನು ಸೇರಿಸಿಕೊಂಡು ವಿಭಾಗ ಮಾಡಲು ನಾವು ಒಪ್ಪದೇ ಇದ್ದ ಕಾರಣ ಒಟ್ಟು ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಲು ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ತಾಯಿ ನನ್ನ ತಂದೆಯ ಸಹೋದರಿಯರು ಮತ್ತು ಮೃತ ಸಹೋದರಿಯರ ವಾರಸುದಾರರಿಗೆ ಹಿಸ್ಸೆ ಕೊಡಲು ಒಪ್ಪಿರಲಿಲ್ಲ ಎಂದರೆ ಸರಿಯಲ್ಲ. ಎಲ್ಲಾ ವಾರಸುದಾರರನ್ನು ಈ ದಾವೆಯಲ್ಲಿ ಸೇರಿಸಿ ಎಲ್ಲರಿಗೂ ಹಿಸ್ಸೆ ಕೋಡುವುದಾದರೆ ದಾವಾಸ್ವತ್ತುಗಳನ್ನು ಹಿಸ್ಸೆ ಮಾಡಲು ಪ್ರತಿವಾದಿಗಳಿಗೆ ಯಾವುದೇ ತಕರಾರಿರುವುದಿಲ್ಲ ಎಂದರೆ ಸರಿಯಲ್ಲ. ಒಟ್ಟು ಕುಟುಂಬದ ಒಪ್ಪಿಗೆ ಇಲ್ಲದೇ ನನ್ನ ತಂದೆ ನನ್ನ ಹೆಸರಿಗೆ 01 ಎಕರೆ 13 ಗುಂಟೆ ಜಮೀನನ್ನು ಬದಲಾವಣೆ ಮಾಡಿದ್ದರಿಂದ ಕುಟುಂಬದಲ್ಲಿ ಭಿನ್ನಾಭಿಪ್ರಾಯ ಬಂದಿರುತ್ತದೆ ಎಂದರೆ ಸಾಕ್ಷಿಯು ಮುಂಚ್ಚಿನಿಂದಲ್ಲೂ ಭಿನ್ನಾಭಿಪ್ರಾಯ ಇತ್ತು ಎಂದು ಹೇಳುತ್ತಾರೆ.

**11.** ನನ್ನ ಕುಟುಂಬದವರು ಒಟ್ಟು ಕುಟುಂಬದ ಆಸ್ತಿಗಳಲ್ಲಿ ಉಳಿದ ಹಿಸ್ಸಾದಾರರಿಗೆ ಹಿಸ್ಸೆಯನ್ನು ನೀಡುವುದನ್ನು ನಿರಾಕರಿಸಿದ್ದರಿಂದ ಉಳಿದ ಹಿಸ್ಸಾದಾರರು ಹಣದ ರೂಪದಲ್ಲಿ ಅವರ ಭಾಗವನ್ನು ಪಡೆದು 01ನೇ ಪ್ರತಿವಾದಿಯೊಂದಿಗೆ ನೊಂದಾಯಿತಾ ವಿಭಾಗಪತ್ರವನ್ನು ಮಾಡಿಕೊಂಡಿರುತ್ತಾರೆಂದರೆ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿಗಳು ಸಲ್ಲಿಸಿರುವ ಪ್ರತಿವಾದ ಪತ್ರವನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ಪ್ರತಿವಾದ ಪತ್ರದಲ್ಲಿ ಪ್ರತಿವಾದಿಗಳು ತಾವು ವಿಭಾಗ ಮಾಡಿಕೊಂಡಿರುವ ವಿಚಾರವನ್ನು ತಿಳಿಸಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ಈ ದಾವೆಯಲ್ಲಿ ಎಲ್ಲಾ ಪಕ್ಷಗಾರರನ್ನು ಸೇರಿಸದೇ ಮತ್ತು ಎಲ್ಲಾ ಆಸ್ತಿಗಳನ್ನು ಸೇರಿಸದೇ ಸುಳ್ಳು ಸಂಗತಿಗಳನ್ನು ಹೇಳಿ ಹೆಚ್ಚಿನ ಹಿಸ್ಸೆ ಪಡೆಯುವ ಸಲುವಾಗಿ ಸುಳ್ಳು ದಾವೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ತಪ್ಪು ಸಂಗತಿಗಳನ್ನು ಹೇಳಿರುವ ದಾವೆಗೆ ನಾನು ಪೂರಕವಾಗಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮಗೆ ಅನುಕೂಲವಾಗುವಂತೆ ನಿಪಿ–11 ಮತ್ತು ಇತರೆ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಕೇಳಿದ ಹಾಗೆ ಭಾಗ ಪಡೆಯಲು ಅರ್ಹಳಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

*(ರಾಘವೇಂದ್ರ. ಡಿ.)*
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಭದ್ರಾವತಿ